ಕರ್ನಾಟಕ ವಿಧಾನಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	944(1096)
ಸದಸ್ಯರ ಹೆಸರು	ಶ್ರೀ ಎಂ ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ವಿಷಯ	ಹಿರಿಯ ನಾಗರಿಕರಿಗೆ ನೀಡುತ್ತಿರುವ ಮಾಸಾಶನದ ಬಗ್ಗೆ.
ಉತ್ತರಿಸಬೇಕಾದ ದಿನಾಂಕ	21-09-2021
ಉತ್ತರಿಸುವ ಸಚಿವರು	ಕಂದಾಯ ಸಚಿವರು
ಪ್ರಶ್ನೆ	**ಉತ್ತರ**
ಅ) ಪ್ರಸ್ತುತ ರಾಜ್ಯದಲ್ಲಿರುವ ಮಾಸಾಶನ ಹಾಗೂ ವೃದ್ಧಾಪ್ಯ ವೇತನವನ್ನು ಪಡೆಯುತ್ತಿರುವ ಫಲಾನುಭವಿಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)	ರಾಜ್ಯದಲ್ಲಿ ಒಟ್ಟು 68.95 ಲಕ್ಷ ಫಲಾನುಭವಿಗಳು ವಿವಿಧ ಪಿಂಚಣಿ ಯೋಜನೆಗಳಡಿ ಮಾಸಾಶನ ಪಡೆಯುತ್ತಿದ್ದು, ಈ ಪೈಕಿ 41.68 ಲಕ್ಷ ಫಲಾನುಭವಿಗಳು ವೃದ್ಧಾಪ್ಯ ವೇತನ ಪಡೆಯುತ್ತಿದ್ದಾರೆ. ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.
ಆ) ನೂತನ ಮುಖ್ಯಮಂತ್ರಿಗಳು ಮಾಸಾಶನ ಮತ್ತು ವೃದ್ಧಾಪ್ಯ ವೇತನ ಹೆಚ್ಚಳ ಮಾಡಿದ ನಂತರ ಇದುವರೆಗೆ ಎಷ್ಟು ಜನ ಫಲಾನುಭವಿಗಳಿಗೆ ಮಾಶಾಸನ ನೀಡಲಾಗಿದೆ;	ನೂತನ ಮುಖ್ಯಮಂತ್ರಿಗಳು ಅಂಗವಿಕಲ ವೇತನ (ಶೇ 40 ರಿಂದ 75 ರಷ್ಟು ಅಂಗವಿಕಲತೆಯುಳ್ಳ) ಮತ್ತು ವಿಧವಾ ವೇತನದಡಿ ಪಿಂಚಣಿಯನ್ನು ರೂ 600/- ರಿಂದ ರೂ 800/- ಗಳಿಗೆ ಮತ್ತು ಸಂಧ್ಯಾಸುರಕ್ಷಾ ಯೋಜನೆಯಡಿ ರೂ 1000/- ರಿಂದ ರೂ 1200/- ಗಳಿಗೆ ಹೆಚ್ಚಳ ಮಾಡಿದ್ದು, ಫಲಾನುಭವಿಗಳ ವಿವರ ಈ ಕೆಳಕಂಡಂತಿದೆ.

ಕ್ರ ಸಂ	ಯೋಜನೆಯ ಹೆಸರು	ಫಲಾನುಭವಿಗಳ ಸಂಖ್ಯೆ
1	ಅಂಗವಿಕಲ ವೇತನ (ಶೇ 40 ರಿಂದ 75 ರಷ್ಟು ಅಂಗವಿಕಲತೆ)	364502
2	ವಿಧವಾವೇತನ	1717585
3	ಸಂಧ್ಯಾಸುರಕ್ಷಾ ಯೋಜನೆ	2792627
	ಒಟ್ಟು	**4874714**

ಇ) ಕೆಲವು ಫಲಾನುಭವಿಗಳಿಗೆ ಸಮಯಕ್ಕೆ ಸರಿಯಾಗಿ ಮಾಸಾಶನ ಸಿಗುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಯಾವ ಕಾಲಮಿತಿಯೊಳಗೆ ಫಲಾನುಭವಿಗಳಿಗೆ ಮಾಶಾಸನ ನೀಡಲಾಗುತ್ತದೆ?	ಸಾಮಾಜಿಕ ಭದ್ರತಾ ಪಿಂಚಣಿ ಪಾವತಿಗಳನ್ನು National payment corporation of India (NPCI) ಮೂಲಕ ನಿರ್ವಹಿಸುತ್ತಿದ್ದು, ಫಲಾನುಭವಿಗಳ ಬ್ಯಾಂಕ್ ಖಾತೆ ವಿವರ / ಐಎಫ್‌ಎಸ್‌ಸಿ ಕೋಡ್ / ಪಿನ್‌ಕೋಡ್ ಗಳ ಮಾಹಿತಿಯನ್ನು ನಿಖರವಾಗಿ ನೀಡದೇ ಇರುವ ಕಾರಣ NPCI ನಿಂದ ಸ್ವೀಕೃತವಾಗುವ NO SUCH ACCOUNT / INVALID BANK DETAILS ಮತ್ತು INVALID ADDRESS ಕಾರಣದಿಂದ ಪಿಂಚಣಿ ಪಾವತಿಯಾಗದೆ ಇರುವುದು ಕಂಡುಬಂದಿದ್ದು, ಇಂತಹ ಫಲಾನುಭವಿಗಳ ಪಟ್ಟಿಯನ್ನು ತಾಲ್ಲೂಕು ಮಟ್ಟದಲ್ಲಿ ಪಿಂಚಣಿ ನಪಾವತಿ ಕಾರಣದೊಂದಿಗೆ ಪಡೆಯಲು ಹಾಗೂ ಈ ಬಗ್ಗೆ ಪರಿಶೀಲಿಸಿ ಬ್ಯಾಂಕ್ ಖಾತೆ ವಿವರ ಹಾಗೂ ವಿಳಾಸ ನ್ಯೂನತೆಗಳನ್ನು ಸರಿಪಡಿಸಲು ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಿದೆ. ನ್ಯೂನತೆಗಳನ್ನು ಸರಿಪಡಿಸಿ ತಂತ್ರಾಂಶದಲ್ಲಿ ತಹಶೀಲ್ದಾರ್‌ರು ಅನುಮೋದನೆ ನೀಡಿದ ನಂತರ ಸರಿಪಡಿಸಲಾದ ಮಾಹಿತಿಯನ್ನು ಖಜಾನೆಗೆ ಅನುಕಲನೆ ಮೂಲಕ ವರ್ಗಾಯಿಸಿ ತ್ವರಿತವಾಗಿ ಪಿಂಚಣಿ ಪಾವತಿಗೆ ಕ್ರಮ ವಹಿಸಲಾಗುತ್ತಿದೆ.

ಸಂಖ್ಯೆ: DSSP/LCQ/23/2021

(ಆರ್.ಅಶೋಕ)
ಕಂದಾಯ ಸಚಿವರು

ಮಾನ್ಯ ವಿಧಾನಪರಿಷತ್ತಿನ ಸದಸ್ಯರಾದ
ಶ್ರೀ ಎಂ ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ರವರ ಚುಕ್ಕೆ ಗುರುತಿಲ್ಲದ ಪ್ರ.ಸಂ 944(1096) ಕ್ಕೆ ಅನುಬಂಧ

ಕ್ರ ಸಂ	ಜಿಲ್ಲೆಯ ಹೆಸರು	ಮಾಸಾಶನ ಪಡೆಯುತ್ತಿರುವ ಒಟ್ಟು ಫಲಾನುಭವಿಗಳ ಸಂಖ್ಯೆ	ವೃದ್ಧಾಪ್ಯ ವೇತನ ಯೋಜನೆ	ಸಂಧ್ಯಾಸುರಕ್ಷಾ ಯೋಜನೆ
1	ಬಾಗಲಕೋಟೆ	206588	20244	86631
2	ಬಳ್ಳಾರಿ	287139	70054	84103
3	ಬೆಂಗಳೂರು ಗ್ರಾಮಾಂತರ	123764	36217	44381
4	ಬೆಳಗಾವಿ	602716	77705	304115
5	ಬೆಂಗಳೂರು ನಗರ	414651	77534	154967
6	ಬೀದರ್	223912	45492	96376
7	ಚಾಮರಾಜನಗರ	206382	91348	40317
8	ಚಿಕ್ಕಬಳ್ಳಾಪುರ	194687	34532	92452
9	ಚಿಕ್ಕಮಗಳೂರು	161924	28806	76503
10	ಚಿತ್ರದುರ್ಗ	233862	26677	117387
11	ದಕ್ಷಿಣ ಕನ್ನಡ	158111	19846	62926
12	ದಾವಣಗೆರೆ	215351	50266	79954
13	ಧಾರವಾಡ	216993	47983	67432
14	ಗದಗ	131968	37612	32556
15	ಹಾಸನ	305745	113332	93288
16	ಹಾವೇರಿ	199446	15021	84112
17	ಕಲಬುರಗಿ	229703	41757	97887
18	ಕೊಡಗು	50724	8561	21334
19	ಕೋಲಾರ	218231	51992	92179
20	ಕೊಪ್ಪಳ	175656	25590	73685
21	ಮಂಡ್ಯ	335397	111647	97821
22	ಮೈಸೂರು	345128	49278	150001
23	ರಾಯಚೂರು	242859	57046	94420
24	ರಾಮನಗರ	208959	52674	85035
25	ಶಿವಮೊಗ್ಗ	159717	26431	65116
26	ತುಮಕೂರು	391672	51911	200271
27	ಉಡುಪಿ	137760	17767	66721
28	ಉತ್ತರಕನ್ನಡ	135267	27790	51202
29	ವಿಜಯಪುರ	241333	40095	110929
30	ಯಾದಗಿರಿ	140049	21097	68526
	ಒಟ್ಟು	**6895694**	**1376305**	**2792627**